## ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 608
02. ಸದಸ್ಯರ ಹೆಸರು : ಡಾ. ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
03. ಉತ್ತರಿಸುವ ದಿನಾಂಕ : 13.12.2018
04. ಉತ್ತರಿಸುವ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ರಾಜ್ಯದೊಳಗೆ ಆತಂಕವಾದಿಗಳು, ಭಯೋತ್ಪಾದಕರು ಹಾಗೂ ನಗರ ಪ್ರದೇಶಗಳಲ್ಲಿ ನಕ್ಸಲರು ನುಸುಳರುವ ಆತಂಕಕಾರಿ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವುದರಿಂದ ಸಾರ್ವಜನಿಕರ ಆತಂಕ ನಿವಾರಿಸಲು "ಗುಪ್ತದಳ"ದಿಂದ ಒಳಾಡಳಿತ ಇಲಾಖೆಯು ಮಾಹಿತಿ ಸಂಗ್ರಹಿಸಿದೆಯೇ; | 2016ರಿಂದ ಇಲ್ಲಿಯವರೆವಿಗೆ ಭಯೋತ್ಪಾದನೆ ಮತ್ತು ನಕ್ಸಲರ ಕೃತ್ಯದ ಬಗ್ಗೆ ಯಾವುದೇ ಪ್ರಕರಣಗಳು ಕರ್ನಾಟಕ ರಾಜ್ಯದಲ್ಲಿ ವರದಿಯಾಗಿರುವುದಿಲ್ಲ. ರಾಜ್ಯದೊಳಗೆ ಬಂಧಿಸಲ್ಪಡುವ ಆತಂಕವಾದಿಗಳು ಮತ್ತು ಭಯೋತ್ಪಾದಕರ ವಿವರಗಳನ್ನು ಹಾಗೂ ಭಯೋತ್ಪಾದನೆ ಮತ್ತು ನಕ್ಸಲರ ಚಟುವಟಿಕೆಗಳ ಬಗ್ಗೆ ಗುಪ್ತವಾಗಿ ಸಂಗ್ರಹಿಸಲ್ಪಡುವ ಮಾಹಿತಿಯನ್ನು ರಾಜ್ಯ ಗುಪ್ತದಳದಿಂದ ಗೃಹ ಇಲಾಖೆಗೆ ಒದಗಿಸಲಾಗುತ್ತದೆ. |
| ಆ) | ನಾಡಿನ ನೆಲ, ಜಲ, ವಾಯು ಹಾಗೂ ನಾಗರೀಕರನ್ನು ಭಯೋತ್ಪಾದನೆಯ ಅಪಾಯದಿಂದ ರಕ್ಷಿಸಲು ಅಗತ್ಯ ಮುಂಜಾಗ್ರತಾ-ಸುರಕ್ಷಾ ಕ್ರಮಗಳನ್ನು ಸರ್ಕಾರ ಕೈಗೊಂಡಿದೆಯೇ; ಈ ಬಗ್ಗೆ ನಾಗರೀಕರಲ್ಲಿ ಜಾಗೃತಿ ಮೂಡಿಸಿದೆಯೇ? | ನಾಡಿನ ನೆಲ, ಜಲ, ವಾಯು ಹಾಗೂ ನಾಗರೀಕರನ್ನು ಭಯೋತ್ಪಾದನೆಯ ಅಪಾಯದಿಂದ ರಕ್ಷಿಸಲು ಸರ್ಕಾರವು ಈ ಕೆಳಕಂಡಂತೆ ಮುಂಜಾಗ್ರತಾ-ಸುರಕ್ಷಾ ಕ್ರಮಗಳನ್ನು ಕೈಗೊಂಡಿರುತ್ತದೆ.<br>1. ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸಲು ಭಯೋತ್ಪಾದಕ ನಿಗ್ರಹ ದಳವು (ATC) 1992 ರಿಂದ ಕಾರ್ಯ ಪ್ರವೃತ್ತವಾಗಿದೆ.<br>2. ದಿನಾಂಕ 12.12.2008ರಂದು ಭಯೋತ್ಪಾದಕ ಚಟುವಟಿಕೆಯನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು ಪ್ರತ್ಯೇಕವಾಗಿ ಅಂತರಿಕ ಭದ್ರತಾ ವಿಭಾಗ (ISD) ರಚನೆಯಾಗಿರುತ್ತದೆ.<br>3. ದಿನಾಂಕ 02.02.2010ರಿಂದ ಗರುಡ ಕಮಾಂಡೋ ಪಡೆಯನ್ನು (CCT) ರಚನೆ ಮಾಡಿದ್ದು, 24x7 ಸಮಯದಲ್ಲಿ ಭಯೋತ್ಪಾದಕರ ದಾಳಿಯನ್ನು ಎದುರಿಸಲು ಸನ್ನದ್ಧಗೊಳಸಲಾಗಿದೆ.<br>4. ದಿನಾಂಕ 14.01.2011ರಂದು ಪ್ರಮುಖ ಸ್ಥಾವರಗಳ ರಕ್ಷಣೆ ಕುರಿತು ಕರ್ನಾಟಕ ರಾಜ್ಯದ ಕೈಗಾರಿಕಾ ರಕ್ಷಣಾ ಪಡೆಯನ್ನು (KSISF) ರಚಿಸಲಾಗಿದೆ.<br>5. ದಿನಾಂಕ 19.04.2013ರಂದು ಆಂತರಿಕ ಭದ್ರತಾ ವಿಭಾಗವನ್ನು ಪೋಲೀಸ್ ಠಾಣಾ ಮಟ್ಟಕ್ಕೆ ಉನ್ನತೀಕರಿಸಿ ಭಯೋತ್ಪಾದಕ ಪ್ರಕರಣಗಳನ್ನು ದಾಖಲಿಸುವ ಮತ್ತು ತನಿಖೆ ಕೈಗೊಳ್ಳುವ ಅಧಿಕಾರ ನೀಡಲಾಗಿರುತ್ತದೆ.<br>6. 2 ಪ್ಯಾರಾ ಸ್ಪೆಷಲ್ ಫೋರ್ಸ್ ಪಡೆಯನ್ನು ಬೆಂಗಳೂರು ನಗರದಲ್ಲಿ ಭಯೋತ್ಪಾದಕ ದಾಳಿಯ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಸ್ಥಾಪಿಸಲಾಗಿದೆ. |

| | | |
|---|---|---|
| | | 7. ಸೂಕ್ಷ್ಮ ಸ್ಥಾವರಗಳು, ವಿದೇಶಿ ರಾಯಭಾರಿ ಕಚೇರಿಗಳ ಸಂಸ್ಥೆಗಳು, ಪ್ರಾರ್ಥನಾ ಸ್ಥಳಗಳು, ಜನನಿಬಿಡ ಪ್ರದೇಶಗಳಾದ ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ವ್ಯಾಪಾರ ವಹಿವಾಟು ಕೇಂದ್ರಗಳು ಮುಂತಾದ ಪ್ರದೇಶಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತಿದೆ.<br>8. ಜಿಲ್ಲಾ ಮಟ್ಟದಲ್ಲಿ ಭಯೋತ್ಪಾದಕ ಚಟುವಟಿಕೆಯನ್ನು ನಿಗ್ರಹಿಸಲು ಮತ್ತು ದಾಳಿಯನ್ನು ಎದುರಿಸಲು ಯುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಆಧುನಿಕ ಶಸ್ತ್ರಾಸ್ತ್ರಗಳ ಬಳಕೆ ಹಾಗೂ ಇನ್ನಿತರೆ ವಿಷಯಗಳಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ.<br>9. ಜಾಮೀನಿನ ಮೇಲೆ ಇರುವ ಹಾಗೂ ಖುಲಾಸೆಗೊಂಡಿರುವ ಆರೋಪಿಗಳ ಚಲನ-ವಲನ ಹಾಗೂ ಅವರ ಕಾರ್ಯ ಚಟುವಟಿಕೆಗಳ ಮೇಲೆ ಸೂಕ್ತ ನಿಗಾ ವಹಿಸಲಾಗಿದೆ.<br>10. SMAC (Subsidiary Multi Agency Centre) ಮಾಸಿಕ ಸಭೆಯಲ್ಲಿ ರಾಜ್ಯದ ಮತ್ತು ಕೇಂದ್ರ ಭದ್ರತಾ ಸಂಸ್ಥೆಗಳೊಂದಿಗೆ ಭಯೋತ್ಪಾದನೆ ಪ್ರಕರಣಗಳ ಬಗ್ಗೆ ಮಾಹಿತಿ ಹಾಗೂ ವಿಚಾರಗಳನ್ನು ವಿನಿಮಯ ಮಾಡಿಕೊಂಡು ನಿಗಾ ವಹಿಸಲಾಗುತ್ತಿದೆ.<br>11. ಕರಾವಳಿ ಕಾವಲು ಪಡೆಯು ಇಂಡಿಯನ್ ಕೋಸ್ಟಲ್ ಗಾರ್ಡ್ ಹಾಗೂ ಭಾರತೀಯ ವಾಯು ಪಡೆಯವರೊಂದಿಗೆ ಸೇರಿಕೊಂಡು ಸಮುದ್ರ ತೀರದ ರಕ್ಷಣಾ ಕಾರ್ಯದಲ್ಲಿ ನಿರತವಾಗಿರುತ್ತದೆ.<br><br>ಕೇಂದ್ರ ಭದ್ರತಾ ಸಂಸ್ಥೆಗಳಿಂದ ಹಾಗೂ ಇತರ ರಾಜ್ಯಗಳಿಂದ ಭಯೋತ್ಪಾದನೆ ಹಾಗೂ ಆತಂಕಕಾರಿ ವಿಷಯಗಳ ಕುರಿತು ಸ್ವೀಕೃತವಾಗುವ ಮಾಹಿತಿಯನ್ನು ಎಲ್ಲಾ ನಗರ ಹಾಗೂ ಜಿಲ್ಲಾ ಪೊಲೀಸ್ ಮುಖ್ಯಸ್ಥರುಗಳೊಂದಿಗೆ ವಿನಿಮಯ ಮಾಡಿಕೊಂಡು ಕಾಲಕಾಲಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿರುತ್ತದೆ. ಭಯೋತ್ಪಾದಕ ಚಟುವಟಿಕೆಗಳ ಕುರಿತು ನಾಗರೀಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. |

ಒಇ 204 ಪೊಸಇ 2018

(ಹೆಚ್. ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ